(೨) ಸೆಪ್ಟೆಂಬರ್ ೨೬ರಂದು ಶಿವಮೊಗ್ಗದ ಜೈಲರ್ ಮತ್ತಿತರ ಸಿಬ್ಬಂದಿಗೆ ಪೋಲೀಸರು ಕಿರುಕುಳ ಕೊಟ್ಟಿರುವ ಬಗ್ಗೆ

ಶ್ರೀ ಕೆ.ಹೆಚ್. ಶ್ರೀನಿವಾಸ್.—ಶಿವಮೊಗ್ಗ ಪೊಲೀಸರವರು ಶಿವಮೊಗ್ಗ ಜೈಲಿನ ಮುಖ್ಯಾಧಿಕಾರಿಗಳು ಜೈಲರ್ ಹಾಗೂ ಇನ್ನಿತರ ಸಿಬ್ಬಂದಿಯನ್ನು ದಿನಾಂಕ ೨೬-೯-೮೬ ರಂದು ಅಕ್ರಮವಾಗಿ ಬಂಧಿಸಿ, ಅವರಿಗೆ ದೈಹಿಕ, ಮಾನಸಿಕ ಹಾಗೂ ವೈಯಕ್ತಿಕವಾಗಿ ಚಿತ್ರಹಿಂಸೆ ನೀಡಿರುವ ವಿಚಾರದ ಬಗ್ಗೆ ಗೃಹಮಂತ್ರಿಯವರ ಗಮನ ಸೆಳೆಯುತ್ತೇನೆ. ನಿಯಮ ೭೪ರ ಮೇರೆಗೆ ವಿಧಾನ ಸಭಾ ಸದಸ್ಯರಾದ ಶ್ರೀ ಕೆ.ಹೆಚ್. ಶ್ರೀನಿವಾಸ್‌ರವರು ಕೊಟ್ಟಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ ೧೯೯ಕ್ಕೆ ಗೃಹ ಸಚಿವರ ಹೇಳಿಕೆ.

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಯವರು).—ಅಧ್ಯಕ್ಷರೆ, ನಾನು ಈ ಕೆಳಗಿನ ಹೇಳಿಕೆ ಮಾಡ ಬಯಸುತ್ತೇನೆ. ದಿನಾಂಕ ೨೫-೯-೮೬ರ ರಾತ್ರಿ ಸುಮಾರು ೭-೩೦ರ ಸಮಯದಲ್ಲಿ ಶಿವಮೊಗ್ಗ ಪೋಲೀಸ್ ಹೆಡ್ ಕಾನ್ಸ್‌ಟೇಬಲ್ ೨೮ ಜನ ಆರೋಪಿಗಳನ್ನು ದಾಖಲಾತಿಗಾಗಿ ಶಿವಮೊಗ್ಗ ಜಿಲ್ಲಾ ಕಾರಾಗೃಹಕ್ಕೆ ಕರೆದುಕೊಂಡು ಬಂದರು. ಆರೋಪಿಗಳಿಗೆ ಅಂದು ಬೆಳಿಗ್ಗೆಯಿಂದ ಆಹಾರವಿಲ್ಲದೆ ಇರುವುದರಿಂದ ಊಟ ಕೊಡುವುದಕ್ಕೆ ಮುಂಜೆ ಜೈಲಿನೊಳಗೆ ಹೋಗುವುದಿಲ್ಲವೆಂದು ಹಠ ಹಿಡಿದರು. ಆಗ ಕಾರಾಗೃಹ ಅಧೀಕ್ಷಕರು ೧-೩೦ ಗಂಟೆ ಸಮಯ ಕೊಟ್ಟರೆ ಊಟ ಹಾಕಿಸುವುದಾಗಿಯೂ ಅಥವಾ ಆರೋಪಿಗಳ ಪತ್ತಿರ ಸ್ವತಃ ಹಣವಿದ್ದರೆ ಬೈಪಡ್ಡು ಮತ್ತು ಬಾಳೆಹಣ್ಣುಗಳನ್ನು ತರಿಸಿಕೊಡುವುದಾಗಿ ಅಥವಾ ಪೋಲೀಸರೇ ಊಟ ಮಾಡಿಸಿಕೊಂಡು ಕರೆತರುವುದೆಂದು ಸಲಹೆ ಮಾಡಿದರು. ಆಗ ಪೋಲೀಸ್ ಹೆಡ್ ಕಾನ್ಸ್‌ಟೇಬಲ್‌ನ್ನು ನ್ಯಾಯಾಧೀಶರಿಗೆ ಒಂದು ಪತ್ರವನ್ನು ಕೊಟ್ಟರೆ ನ್ಯಾಯಾಧೀಶರ ಮುಂದೆ ಹಾಜರು ಪಡಿಸುತ್ತೇನೆಂದು ಹೇಳಿದನು. ಅದರಂತೆ ಅಧೀಕ್ಷಕರು ಈ ಬಗ್ಗೆ ನ್ಯಾಯಾಧೀಶರಿಗೆ ಒಂದು ಪತ್ರವನ್ನು ಬರೆದುಕೊಟ್ಟರು. ಆ ಪತ್ರವನ್ನು ತೆಗೆದುಕೊಂಡು ಪೋಲೀಸರು ಆರೋಪಿಗಳಿಗೆ ಊಟದ ವ್ಯವಸ್ಥೆ ಮಾಡಲು ಕರೆದುಕೊಂಡು ಹೋದರು. ಇದಾದನಂತರ ಅಧೀಕ್ಷಕರು ಜೈಲರ್‌ರವರಿಗೆ ಆರೋಪಿಗಳನ್ನು ತಂದರೆ ನೇರವಾಗಿ ದಾಖಲಾತಿ ಮಾಡಿಕೊಳ್ಳುವಂತೆ ಮತ್ತು ಅವಶ್ಯಕತೆ ಬಿದ್ದರೆ ಜೈಲ್ ಪತಿಯಿಂದ ಒಳಗೆ ಆರೋಪಿಗಳಿಗೆ ಊಟದ ವ್ಯವಸ್ಥೆ ಮಾಡುವಂತೆ ಆದೇಶ ಇತ್ತಿದ್ದರು. ಮತ್ತು ಆರೋಪಿಗಳನ್ನು ಇಡುವುದಕ್ಕಾಗಿ ಬ್ಯಾರಕ್‌ನ್ನು ಸ್ವಚ್ಛ ಮಾಡಿ ಇಡಲಾಗಿತ್ತು.

ಸುಮಾರು ೮-೩೦ರ ಸಮಯದಲ್ಲಿ ಸಬ್ ಇನ್ಸ್‌ಪೆಕ್ಟರ್‌ರವರು ಆರೋಪಿಗಳನ್ನು ಮತ್ತೆ ಜೈಲಿಗೆ ಕರೆತಂದರು. ಆಗ ಜೈಲರ್‌ರವರು ಮನೆಯಿಂದ ಬಂದು ಊಟದ ವ್ಯವಸ್ಥೆಯಾಗಿದೆಯೇ ಎಂಬುದಾಗಿ ಕೇಳಿದರು. ಆದಕ್ಕೆ ಸಬ್‌ಇನ್ಸ್‌ಪೆಕ್ಟರ್‌ರವರು ಊಟ ತಯಾರಿಸಿ ಕೊಡುವವರೆಗೆ ಆರೋಪಿಗಳು ತಡೆಯುವುದಾಗಿ ಒಪ್ಪಿರುತ್ತಾರೆ ಆವರನ್ನು ದಾಖಲಾತಿ ಮಾಡಿಕೊಳ್ಳಿ ಎಂಬುದಾಗಿ ಹೇಳಿದರು. ಆದಕ್ಕೆ ಜೈಲರ್‌ರವರು ಅಧೀಕ್ಷಕರ ಆಪ್ಪಣೆಯನ್ನು ಪಡೆದು ತೆಗೆದುಕೊಳ್ಳುವುದಾಗಿ ಹೇಳಿದರು. ಆಗ ಸಬ್ ಇನ್ಸ್‌ಪೆಕ್ಟರ್‌ರವರು ಜೈಲಿನಿಂದ ಕೊಟ್ಟ ಪತ್ರವನ್ನು ಹರಿದು ಬಿಸಾಕಿ, ನ್ಯಾಯಾಧೀಶರ ಪತ್ತಿರ ಹೋಗಿ ಕಾರಾಗೃಹದಲ್ಲಿ ದಾಖಲು ಮಾಡಿಕೊಳ್ಳಲು ನಿರಾಕರಿಸುತ್ತಿದ್ದಾರೆಂದು ಹೇಳುವುದಾಗಿ ತಿಳಿಸಿದರು. ತದನಂತರ ಜೈಲು ಅಧಿಕಾರಿಗಳಿಗೂ ಮತ್ತು ಪೋಲೀಸ್ ಅಧಿಕಾರಿಗಳಿಗೂ ಪರಸ್ಪರ ವಾಗ್ವಾದ ನಡೆದು ಸರ್ಕಲ್ ಇನ್ಸ್‌ಪೆಕ್ಟರ್‌ರವರು ಕೆಲವು ಜೈಲು ಅಧಿಕಾರಿಗಳನ್ನು ಬಂಧಿಸಿ ಠಾಣೆಯಲ್ಲಿ ಲಾಕಪ್ಪಿನಲ್ಲಿಟ್ಟರು. ೨೬-೯-೮೬ ರಂದು ಪೋಲೀಸರು ಮುಚ್ಚಳಿಕೆ ಬರೆಸಿಕೊಂಡು ಜೈಲು ಅಧಿಕಾರಿಗಳನ್ನು ಬಿಡುಗಡೆ ಮಾಡಿದರು.

ಈ ಪ್ರಕರಣದ ಬಗ್ಗೆ ಕಾರಾಗೃಹದ ಉಪ ಮಹಾ ನಿರೀಕ್ಷಕರಿಂದ ಒಂದು ವರದಿಯನ್ನು ತರಿಸಲಾಗಿದೆ. ಪೋಲೀಸ್ ಉಪ ಮಹಾ ನಿರೀಕ್ಷಕರಿಂದಲೂ ವರದಿಯನ್ನು ತರಿಸಲಾಗಿದೆ. ಈ ವರದಿಗಳನ್ನು ಪರಿಶೀಲಿಸಿ ಇಬ್ಬರು ಆರಕ್ಷಕ ಉಪ ನಿರೀಕ್ಷಕರುಗಳನ್ನು ಅಮಾನತ್ತಿನಲ್ಲಿ ಕೂಡಲೇ ಇಡ ಬೇಕೆಂದು ಹಾಗೂ ಜಿಲ್ಲಾ ಆರಕ್ಷಕ ಅಧೀಕ್ಷಕರು ಆವರ ಬಗ್ಗೆ ವಿಚಾರಣೆ ಮಾಡಲು ಪೋಲೀಸ್ ಮಹಾ ನಿರ್ದೇಶಕರಿಗೆ ಕೇಳಲು ಆದೇಶವನ್ನು ಹೊರಡಿಸಬೇಕೆಂದು ಗೃಹ ಕಾರ್ಯದರ್ಶಿಯವರಿಗೆ ಆಜ್ಞೆ ನೀಡಲಾಗಿದೆ.

೩-೫೦ ಪಿ. ಎಂ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸಾಮಾನ್ಯ ಉಪಾಧ್ಯಕ್ಷರೇ, ನಿರೀಕ್ಷೆ ಮಾಡಿದಂಥ ರೀತಿಯಲ್ಲೇ, ಸರ್ಕಾರ ಇದನ್ನು ಸಂಪೂರ್ಣವಾಗಿ ಡೆಲ್ಯೂಟ್ ಮಾಡಿ ಇವನ್ನು ಓದಿದರೆ ಏತಕ್ಕೆ ಈ ಘಟನೆ ಆಯಿತು? ಯಾರಿಗೂ ಅರ್ಥವಾಗದ ರೀತಿಯಲ್ಲಿ ಒಂದು ಸ್ಟೇಟ್‌ಮೆಂಟನ್ನು ಸಂಬಂಧಪಟ್ಟ ಅಧಿಕಾರಿಗಳು ತಯಾರು

ಮಾಡಿದ್ದಾರೆ. ಅದನ್ನು ಇಲ್ಲಿ ಮಾನ್ಯಮಂತ್ರಿಗಳು ಓದಿದ್ದಾರೆ. ಎರಡೂ ಕಡೆಯಿಂದ ವರದಿಗಳನ್ನು ತರಿಸಿಕೊಂಡಿದ್ದೇವೆ ಎಂದು ಹೇಳಿದರು. ಒಂದು ಕಡೆ ಜೈಲರು ಸಂಬಂಧಪಟ್ಟ ರಕ್ಷಣಾಧಿಕಾರಿಗಳಿಂದ ಮತ್ತು ಉಪ ಮಹಾನಿರೀಕ್ಷಕರಿಂದ ಮತ್ತೊಂದು ಕಡೆ ಪೋಲೀಸು ಉಪ ಮಹಾನಿರೀಕ್ಷಕರಿಂದ ಹೀಗೆ ಎರಡೂ ಕಡೆಯಿಂದ ವರದಿಗಳನ್ನು ತರಿಸಿಕೊಂಡು ಬ್ಲೆಂಡ್ ಮಾಡಿದ್ದಾರೆ. ಅಂದರೆ ಯಾರೋ ಒಬ್ಬರು ಸರಾಸರಿ ಎಷ್ಟು ಆಳ ಇದೆಯೆಂದು ನೋಡಿ ನದಿ ದಾಟಿದಂತೆ. ಒಂದು ಕಡೆ ದೊಡ್ಡ ಗುಂಡಿ ಇತ್ತು. ಆತ ಮುಳುಗಿ ಹೋದ. ಎರಡೂ ಇಲಾಖೆಗಳಿಂದ ವರದಿಗಳನ್ನು ತರಿಸಿಕೊಂಡು ಯಾರೋ ಬ್ಯಾಹಸ್ಪತಿಗಳು ತಮಗೆ ತೋಚಿದ ರೀತಿಯಲ್ಲಿ ಬ್ಲೆಂಡ್ ಮಾಡಿರಬೇಕು. ಈ ಅರೋಪಿಗಳಾದರೂ ಯಾರು ? ಪರದೇಶಿಗಳಾದ ದಿನಕೂಲಿ ನೌಕರರು. ಶ್ರೀಮಾನ್ ಜೆ. ಹೆಚ್. ಪಟೇಲರಿಗೆ ಮನವಿಯನ್ನು ಆರ್ಪಿಸಬೇಕೆಂದು ಬಂದಿರತಕ್ಕಂಥ ಪರದೇಶಿಗಳು. ೨೮ ಜನರನ್ನು ರಾತ್ರಿ ಎಂಟು ಗಂಟೆ ಹೊತ್ತಿಗೆ ಕರೆದುಕೊಂಡು ಹೋದಾಗ ಬೆಳಿಗ್ಗೆಯಿಂದ ಊಟತಿಂಡಿ ಇಲ್ಲದೇ ಇರುವುದರಿಂದ ಅವರು ಊಟ ಮಾಡದೆ ದಾಖಲು ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದರು. ಇದರಿಂದ ವ್ಯಾಗ್ಯುದ್ಧ ಬೆಳೆದು ಪರಿಸ್ಥಿತಿ ಈ ಮಟ್ಟಕ್ಕೆ ಮುಟ್ಟಿದೆ. ಮಂತ್ರಿಗಳು ಬನ್ನಿ ಎಂದು ಹೇಳಿದಮೇಲೆ, ಅದರಂತೆ ಮಾತನಾಡುವುದಕ್ಕೆ ಇವರು ಹೋಗುತ್ತಿರುವಾಗ ವ್ಯಾನಿನಲ್ಲಿ ಕೂರಿಸಿಕೊಂಡು ೨೮ ಜನರನ್ನು ರಾತ್ರಿ ಕೋರ್ಟ್ ಆರ್ಡರ್ ತೆಗೆದುಕೊಂಡು ಜೈಲಿಗೆ ತೆಗೆದುಕೊಂಡು ಹೋಗಿದ್ದಾರೆ. ಆಗ ಜೈಲರ್ ಒಪ್ಪಲಿಲ್ಲ. ಜೈಲಿನ ರೂಲ್ಸ್ ಪ್ರಕಾರ ಬೇಗ ಹಾಕಿದೆ, ಮೇಲಾಧಿಕಾರಿಗಳ ಅಪ್ಪಣೆ ಪಡೆದು ತೆಗೆದುಕೊಳ್ಳುತ್ತೇನೆ ಎಂದು ಹೇಳಿದರು. ಇದರ ಮೇಲೆ ಅವರಲ್ಲಿ ವಾಗ್ಯುದ್ಧ ನಡೆದು ಜೈಲು ಸಿಬ್ಬಂದಿಯನ್ನು ಹಿಡಿದುಕೊಂಡು ಬಂದು ೨೭ ರಂದು ಬಿಟ್ಟಿದ್ದಾರೆ. ಇದರ ತಾತ್ಪರ್ಯ ಏನು ? ಅವರಿಗೆ ಎಲ್ಲಾ ಸೌಲಭ್ಯಗಳೂ ಆಗಿವೆ. ಪೋಲೀಸ್ ಉಪಚಾರದ ಬಗ್ಗೆ ನಾವು ಇಲ್ಲಿ ಪ್ರತಿದಿವಸ ಮಾತನಾಡುತ್ತೇವೆ. ಈ ಸಿಬ್ಬಂದಿಗೆ ಲಾಕಪ್‌ನಲ್ಲಿ ಎಲ್ಲಾ ಉಪಚಾರವೂ ಸಿಕ್ಕಿದೆ. ಲಾಠಿ ಸೇವೆ, ಮತ್ತು ವಿವಸ್ತ್ರಗೊಳಿಸಿ ಹೊಡೆದು.....

ಉಪಾಧ್ಯಕ್ಷರು.—ಇದೆಲ್ಲಾ ರಿಪೋರ್ಟ್‌ನಲ್ಲಿ ಇದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅದರಲ್ಲಿ ಏನೇನೂ ಇಲ್ಲ. ಈ ಘಟನೆಯಾಗಿ ನಾಲ್ಕು ತಿಂಗಳಾಯಿತು. ಇದುವರೆಗೂ ಯಾರ ಮೇಲೂ ಸಹ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಈಗ ಇಬ್ಬರು ರಕ್ಷಣಾಧಿಕಾರಿಗಳು ಉಪ ನಿರೀಕ್ಷಕರನ್ನು ಅಮಾನತ್ತಿನಲ್ಲಿ ಕೂಡಲೇ ಇಡಬೇಕೆಂದು ಹಾಗೂ ಜಿಲ್ಲಾ ರಕ್ಷಣಾಧಿಕಾರಿಗಳು ಅವರ ಬಗ್ಗೆ ವಿಚಾರಣೆ ಮಾಡಲು ಆದೇಶಿಸಲಾಗಿದೆ ಎಂದು ಪೆಳಿದ್ದಾರೆ ಸಬ್ ಇನ್‌ಸ್ಪೆಕ್ಟರನ್ನು ಪೋಲೀಸ್ ಸೂಪರ್‌ರಿಂಟೆಂಡೆಂಟ್ ವಿಚಾರಣೆ ಮಾಡಿದರೆ ಏನಾಗುತ್ತದೆ ? ಏನೂ ಆಗುವುದಿಲ್ಲ. ಏನೋ ಡೆಲ್ಯೂಟ್ ಮಾಡಿ ಬರೆಯುತ್ತಾರೆ. ಅವು ಎರಡೂ ನಿಮ್ಮ ಇಲಾಖೆಗಳಿಗೆ ಸಂಬಂಧ ಇರತಕ್ಕಂಥಾದ್ದು. ಜೈಲು ಅಧಿಕಾರಿಗಳನ್ನು ಪೋಲಿಸರು ಲಾಕಪ್‌ನಲ್ಲಿ ಇಟ್ಟು ಹೊಡೆದರು ಎಂದರೆ ನಿಮ್ಮ ಆಡಳಿತ ಗತಿ ಏನು ? ನಮ್ಮ ಊರಿನಲ್ಲಿ ಜನರು ಗೇಲಿ ಮಾಡಿ ನಗುತ್ತಿದ್ದಾರೆ.

ಜೈಲರನ್ನು ಹಿಡಿದುಕೊಂಡು ಪೋಲೀಸ್ ಲಾಕಪ್‌ನಲ್ಲಿ ಇಟ್ಟುಕೊಂಡು ಹೊಡೆದು ಬಡಿದು ನಾಲ್ಕು ತಿಂಗಳಾಯಿತು. ಇವತ್ತಿನವರೆಗೂ ಯಾರ ಮೇಲೂ ಕ್ರಮ ತೆಗೆದುಕೊಂಡಿಲ್ಲ. ಈಗ ನೀವು ಯಾರನ್ನು ಸಸ್ಪೆಂಡ್ ಮಾಡಿದ್ದೀರಿ ? ನನಗೆ ಗೊತ್ತಿರುವಹಾಗೆ ಇವತ್ತಿನವರೆಗೂ ಯಾರಿಗೂ ಸಸ್ಪೆನ್‌ಷನ್ ಆಗಿಲ್ಲ. ಅವರೆಲ್ಲರೂ ಇದ್ದಹಾಗೆಯೇ ಇದ್ದಾರೆ. ಅದೇ ಜಾಬ್‌ದರ್‌ನಲ್ಲಿಯೇ ಇದ್ದಾರೆ. ಮತ್ತೆ ಇದಕ್ಕೆ ಸಂಬಧಪಟ್ಟವರು ಯಾರು ? ಜೈಲ್ ಅಧಿಕಾರಿಗಳನ್ನು ಯಾವುದೇ ವಿವಾದ ಬರಲಿ, ಕೋರ್ಟ್ ಆರ್ಡರ್ ಇದೆ, ನೀವು ತೆಗೆದುಕೊಳ್ಳಬೇಕು. ಅಥವಾ ಜೆಲರ್‌ರವರು ಒಳಗಡೆ ತೆಗೆದು ಕೊಳ್ಳದೇ ಹೋದರೆ, ನೀವು ಅವರನ್ನು ಬಿಡುಗಡೆ ಮಾಡಿ, ಮತ್ತೆ ಅರೆಸ್ಟ್ ಮಾಡಿ ಲಾಕಪ್ಪಿನಲ್ಲಿ ಇಟ್ಟುಕೊಳ್ಳಿ. ಜೈಲ್ ಅಧಿಕಾರಿಗಳನ್ನು ಬಂಧಿಸಿದ್ದಾರೆ ಎಂಬುದನ್ನು ತಾವು ಒಪ್ಪಿಕೊಂಡಿದ್ದೀರಿ.....

ಶ್ರೀ ಬಿ. ರಾಚಯ್ಯ.—ಇಲ್ಲಿ ಟೈಪು ಮಾಡುವಾಗ ಮಿಸ್ಟೇಕ್ ಆಗಿದೆ. ಜಿಲ್ಲೆಯ ಎಸ್. ಪಿ. ಅವರ ಬಗ್ಗೆ ವಿಚಾರಣೆ ಮಾಡಲು ಡಿ. ಐ. ಜಿ ತಿಳಿಸಿದ್ದಾರೆ. ಡಿ. ಐ. ಜಿ. ಅವರು ರಕ್ಷಣಾಧಿಕಾರಿಗಳು ಅವರ ಬಗ್ಗೆ ವಿಚಾರಣೆ ಮಾಡಲು ಪೋಲೀಸ್ ಮಹಾನಿರ್ದೇಶಕರು ಆದೇಶ ಕೊಟ್ಟಿದ್ದಾರೆಂದು ಆಗಿದೆ. ಟೈಪಿಂಗ್‌ನಲ್ಲಿ ಸ್ವಲ್ಪ ಮಿಸ್ಟೇಕ್ ಆಗಿದೆ. ಎಸ್. ಪಿ. ಅವರ ಮೇಲೆ ಆರೋಪಣೆ ಇತ್ತು, ಆ ಆರೋಪಣೆಯನ್ನು ನಮ್ಮ ಡಿ. ಐ. ಜಿ. ರವರು ವಿಚಾರಣೆ ಮಾಡಬೇಕೆಂದು ಹೇಳಿ, ಅವರಿಬ್ಬರನ್ನೂ ಅಮಾನತ್ತಿನಲ್ಲಿಟ್ಟಿದೆ. ಎಸ್. ಪಿ. ಅವರ ಮೇಲೆ ಒಂದು ಆರೋಪಣೆ ಇತ್ತು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇಲ್ಲಿ ನೀವು ಹೇಳುವುದು ನನಗೆ ಅರ್ಥವಾಗುವುದಿಲ್ಲ. ಎರಡು ಜನರು ರಕ್ಷಣಾ ನೀರೀಕ್ಷಕರನ್ನು ಸಸ್‌ಪೆನ್‌ಷನ್‌ನಲ್ಲಿಟ್ಟು ಅವರ ಬಗ್ಗೆ ವಿಚಾರಣೆ, ಎಸ್. ಪಿ. ಅವರ ಬಗ್ಗೆ ಹಾಗೆಯೇ ವಿಚಾರಣೆ. ಇಲ್ಲಿ ಇದನ್ನೆಲ್ಲಾ ಮಾಡುವವರು ಯಾರು ? ತಮಗೆ ಎರಡು ವರದಿಗಳು

ಬಂದಿವೆ. ಈ ವರದಿಯಲ್ಲಿ ಏನಿದೆ. ಪೋಲೀಸಿನವರು ಈ ಕೆಲಸ ಮಾಡುವುದಕ್ಕೆ, ಅವರಿಗೆ ಏನು ಅಧಿಕಾರ ಇತ್ತು. ಜೈಲಾರನ್ನು ಬಂಧಿಸಿ, ಲಾಕಪ್ಪಿನಲ್ಲಿ ಇಟ್ಟುಕೊಳ್ಳುವುದಕ್ಕೆ ಏನು ಅಧಿಕಾರ ಇತ್ತು ? ಅವರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಎಷ್ಟನೇ ತಾರೀಖಿಗೆ ತಾವು ಆಜ್ಞೆ ಹೊರಡಿಸಿದ್ದೀರಿ.

ಶ್ರೀ ಬಿ. ರಾಚಯ್ಯ.—ಡಿಸೆಂಬರ್ ೨೬ನೇ ತಾರೀಖು ವರದಿ ಬಂದಿದೆ ವರದಿ ಬಂದಮೇಲೆ ಜೈಲ್ ಮಂತ್ರಿಗಳ ಹತ್ತಿರವೂ ಚರ್ಚೆ ಮಾಡಿದೆ. ಈ ವಿಚಾರದಲ್ಲಿ ಪೋಲೀಸ್ ಇಲಾಖೆ ತಪ್ಪು ಮಾಡಿದ್ದರೆ, ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಶಿಕ್ಷೆ ಮಾಡುವುದಕ್ಕೆ ಈ ವರದಿ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದೆ. ಬಹುಶಃ ಚುನಾವಣೆ ಕಾರಣದಿಂದ ಒಂದು ತಿಂಗಳು ಅವರ ಹತ್ತಿರ ಉಳಿದು ಕೊಂಡಿತು, ಇದು ಬಂದಮೇಲೆ ನಾನು ಆದೇಶ ಕೊಟ್ಟಿದ್ದೇನೆ. ನನ್ನ ಮುಖ್ಯಮಂತ್ರಿಗೂ ವಿಚಿತವಾಗಿದೆ. ಪೋಲೀಸರ ಉದ್ಧಟತನ ಜಾಸ್ತಿ ಎಂದು ತಿಳಿದು ಬಂದಿರುವುದರಿಂದ, ಆಪರಿಬ್ಬರ ಮೇಲೆ ಕ್ರಮ ತೆಗೆದುಕೊಂಡಿದ್ದೇನೆ. ಜೈಲ್ ಅಧಿಕಾರಿ ಕೊಟ್ಟಿರತಕ್ಕ ವರದಿ ಪ್ರಕಾರ, ಬಹುಶಃ ಜೈಲರ್ ಅವರದೂ ಪ್ರಶಿಷ್ಟೆ ಜಾಸ್ತಿಯಾಗಿದೆ. ಯಾವ ಎರಡು ಇಲಾಖೆಗಳು ಪರಸ್ಪರ ಸೌಹಾರ್ದದಿಂದ ಒಂದಕ್ಕೊಂದಕ್ಕೆ ಪೂರಕವಾಗಿ ಕೆಲಸ ಮಾಡಬೇಕಾಗಿತ್ತೋ ಅಲ್ಲಿ ಸ್ವಪ್ರತಿಷ್ಠೆ ಜಾಸ್ತಿಯಾಗಿ ಈ ಮಟ್ಟಕ್ಕೆ ಬಂದಿದೆ. ಅದಕ್ಕೋಸ್ಕರ ನಾನು ಮಾನ್ಯ ಬಂಧೀಖಾನೆಯ ಮಂತ್ರಿಗಳಿಗೂ ಕೇಳಿಕೊಂಡಿದ್ದೇನೆ, ನಿಮ್ಮ ಇಲಾಖಾ ತನಿಖೆಯ ವರದಿಯ ಪ್ರಕಾರ ನೀವುಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಂಡಿದ್ದೇನೆ. ನನ್ನ ಇಲಾಖೆಯಲ್ಲಿ ನಡೆದಂಥ ಈ ಪ್ರಕರಣದಲ್ಲಿ, ಸರಕಾರದ ಕೆಲಸ ಮಾಡತಕ್ಕಂಥ ಕಾಲದಲ್ಲಿ ಒಂದೇ ಜಾತಿಗೆ ಸಂಬಂಧಪಟ್ಟ ಅಂದರೆ ಗೃಹಖಾತೆಗೆ ಸಂಬಂಧಪಟ್ಟ ವಿಚಾರದಲ್ಲಿ ಈ ರೀತಿಯಾದ ಭಿನ್ನಾಭಿಪ್ರಾಯಕ್ಕೆ ಎಡೆ ಕೊಟ್ಟಿದ್ದು ತಪ್ಪು ಇಬ್ಬರೂ ಇದನ್ನು ತುಂಬಾ ಪ್ರಶಿಷ್ಟೆಯ ವಿಚಾರ ಮಾಡಿಕೊಂಡು ಜೈಲಿನ ಹೊರಗಡೆ ರಾದ್ಧಾಂತ ಆಗತಕ್ಕ ರೀತಿಯಲ್ಲಿ ಪ್ರಚೋದನೆ ಮಾಡಿ, ಪ್ರೆಸ್‌ನಲ್ಲೂ ಇದು ಬರುವ ರೀತಿ ಮಾಡಿದ್ದಾರೆ. ಜೈಲಿನಲ್ಲಿ ಇದ್ದವರು ಈ ರೀತಿ ಮಾಡಿದ್ದಾರೆ. ಈ ವಿಷಯದಲ್ಲಿ ಪ್ರಚಾರ ಮಾಡದೇ ಇರುವುದಕ್ಕೆ ನಾವು ಹಿಂದೆ ಬಿದ್ದಿದ್ದೇವೆ ಎಂದು ಭಾವನೆ ಮಾಡಿಕೊಂಡು ಇವರೂ ಈ ರೀತಿ ಮಾಡಿದ್ದಾರೆ. ನನಗೆ ಬಂದಿರುವ ವರದಿ ಪ್ರಕಾರ ಖಂಡಿತಾ ಇವರು ತಪ್ಪು ಮಾಡಿದ್ದಾರೆ. ತಮ್ಮ ಎಲ್ಲೆಯನ್ನು ಮೀರಿ ವರ್ತಿಸಿದ್ದಾರೆ. ಅದಕ್ಕೋಸ್ಕರ ಇಬ್ಬರನ್ನು ಸಸ್ಪೆಂಡ್‌ನಲ್ಲಿ ಇಟ್ಟಿದ್ದೇನೆ. ಎಸ್. ಪಿ. ಅವರು ಜೈಲಿನ ಅಧಿಕಾರಿಗಳು ಸಾಕಷ್ಟು ಕೇಳಿಕೊಂಡರೂ ಕೂಡಾ, ಅವರನ್ನು ನಾಳೆ ಬೆಳಿಗ್ಗೆ ಬಿಡುಗಡೆ ಮಾಡುತ್ತೇವೆ ಎಂದು ಹೇಳಿ ಬಿಡದೇ ಇದ್ದುದರಿಂದ, ಮತ್ತು ಅವರು ಉನ್ನತಾಧಿಕಾರಿಗಳಾಗಿದ್ದುಕೊಂಡು ಇದನ್ನು ಸಕಾಲದಲ್ಲಿ ಮಾಡಿ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಅವರ ಮೇಲೆ ವಿಚಾರಣೆ ಮಾಡಬೇಕೆಂದು ಹೇಳಿದ್ದೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನನಗೆ ಗೊತ್ತಿದ್ದ ಮಟ್ಟಿಗೆ ಯಾರನ್ನೂ ಸಸ್ಪೆಂಷನ್ ಮಾಡಿಲ್ಲ, ಯಾವ ತಾರೀಖಿಗೆ ಸಸ್ಪೆಂಡ್ ಮಾಡಿದ್ದೀರಿ, ಯಾರು ಯಾರನ್ನು ಮಾಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ಇಬ್ಬರು ಸಬ್ ಇನ್‌ಸ್ಪೆಕ್ಟರ್‌ಗಳನ್ನು ಮಾಡಿದ್ದೇವೆ. ಒಬ್ಬರು ಗಂಗಾಧರಯ್ಯ ಎಂದು, ಇನ್ನೊಬ್ಬರು ಅಂಬಿಗೇರ್ ಎಂದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅವರು ಎರಡೂ ಜನರಿಗೆ ಮಾಡಿದ್ದೀರಿ ಯಾವಾಗ ಮಾಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ಇಬ್ಬರಿಗೂ ಮಾಡಿದ್ದೇನೆ, ಸಸ್ಪೆಂಷನ್ ಆಜ್ಞೆ ಇನ್ನೂ ಅವರಿಗೆ ತಲುಪಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾಡಿದ್ದೇನೆ, ಇನ್ನೂ ಅವರಿಗೆ ತಲುಪಿಲ್ಲ ಎಂದರೆ ಏನು ಸ್ವಾಮಿ ಸಮಾಚಾರ ಇದು, ನಾಲ್ಕು ತಿಂಗಳಾಯಿತು ಇನ್ನೂ ಸಸ್ಪೆಂಡ್ ಮಾಡಿಲ್ಲ ಎಂದರೆ ನಿಮ್ಮ ಇಲಾಖೆಗೆ ಏನು ಮರ್ಯಾದೆ ಇರುತ್ತದೆ.

ಶ್ರೀ ಬಿ. ರಾಚಯ್ಯ.—ಒಂದು ತಿಂಗಳ ಕಾಲ ಫೈಲ್ ಅವರ ಹತ್ತಿರ ಇತ್ತು ನನ್ನ ಹತ್ತಿರ ಚರ್ಚೆ ಮಾಡಬೇಕೆಂದು ಇಟ್ಟುಕೊಂಡಿದ್ದರು, ನಾನು ಮೊನ್ನೆಯ ದಿನ ತರಿಸಿಕೊಂಡು ಅದನ್ನು ಓದಿಬಿಟ್ಟು ತೀರ್ಮಾನ ತೆಗೆದುಕೊಂಡಿದ್ದೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇಂತಹ ಒಂದು ಘಟನೆ ನಡೆದಾಗ, ಇದರ ಬಗ್ಗೆ ಸ್ವಲ್ಪ ಕ್ರಮ ತೆಗೆದುಕೊಳ್ಳುವುದಕ್ಕೆ ಇಷ್ಟು ದೊಡ್ಡ ಇಲಾಖೆಯಲ್ಲಿ ಎಲ್ಲೂ ಮೆಟ್ಟಿಲುಗಳ ಮೆಲೆ ಅಧಿಕಾರಿಗಳು ಇದ್ದಾರಲ್ಲ ಅವರ್ಯಾರ ಕೈಯಲ್ಲೂ ಸಹ ಏನೂ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೇ ?

ಶ್ರೀ ಬಿ. ರಾಚಯ್ಯ.—ಕ್ರಮ ತೆಗೆದುಕೊಂಡಿದೆ, ಇದರ ಬಗ್ಗೆ ವಿಚಾರಣೆ ನಡೆಸಲು ಗುಪ್ತದಳದ ಡಿ.ಐ.ಜಿ. ರವರನ್ನು ನೇಮಿಸಿತ್ತು. ಅವರು ವಿಚಾರಣೆ ಮಾಡಿದ್ದಾರೆ, ಜೈಲಿನ ಐ.ಜಿ.ಪಿ. ರವರು ಕೂಡ ವಿಚಾರಣೆ ನಡೆಸಿದ್ದಾರೆ, ವಿಚಾರಣೆ ವರದಿ ಬಂದಮೇಲೆ ತಕ್ಕ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ವಿಚಾರಣೆ ನಡೆಸಿದ್ದೇವೆ ಎಂದು ತಾವು ಒಪ್ಪಿಕೊಳ್ಳುತ್ತೀರಿ. ಇನ್ನೂ ಕೂಡ ಸಸ್ಪೆನ್‌ಷನ್ ಆರ್ಡರ್ ತಲುಪಿಲ್ಲ ಎಂದು ಹೇಳುತ್ತೀರಿ. ವಿಚಾರಣೆ ಆಗುತ್ತದೆ, ಜೈಲಿನ ಸೈಡ್‌ನ ಅಧಿಕಾರಿಗಳು ವಿಚಾರಣೆ ನಡೆಸಿ ಅವರದ್ದೇನೂ ತಪ್ಪಿಲ್ಲ ಎಂದು ಅವರ ಕಡೆಯವರನ್ನು ಬಿಟ್ಟು ಬಿಡುತ್ತಾರೆ, ಪೋಲೀಸ್ ಸೈಡ್‌ನವರು ಪೋಲೀಸರ ವಿಚಾರಣೆ ನಡೆಸಿ ಅವರದ್ದೇನೂ ತಪ್ಪಿಲ್ಲ ಎಂದು ಬಿಟ್ಟುಬಿಡುತ್ತಾರೆ, ಮತ್ತೆ ಅವರಿಗೆ ಬ್ಯಾಕ್‌ವೇಜಸ್ ಕೊಟ್ಟು ಆ ಇಬ್ಬರೂ ಬಂದು ಮಾಸೆ ತಿರುವಿಕೊಂಡು ಊರಿನಲ್ಲಿ ಇದ್ದವರನ್ನೆಲ್ಲಾ ಹೊಡೆಯುತ್ತಾರೆ.

ಶ್ರೀ ಬಿ. ರಾಚಯ್ಯ.—ವಿಚಾರಣೆ ಮಾಡದೆ ಶಿಕ್ಷೆ ಮಾಡಿ ಎಂದು ಹೇಳುತ್ತೀರಾ ?

ಶ್ರೀ ಕೆ ಹೆಚ್. ಶ್ರೀನಿವಾಸ್.—ವಿಚಾರಣೆ ಮಾಡಬೇಡಿ ಎಂದು ನಾನು ಹೇಳುತ್ತಿಲ್ಲ. ಒಂದೇ ಸಲ ಅವರ ತಲೆ ಹೊಡೆಯಿರಿ ಎಂದೂ ನಾನು ಹೇಳುತ್ತಿಲ್ಲ ವಿಚಾರಣೆ ಎನ್ನುತಕ್ಕದ್ದು ಯಾರು ತಪ್ಪು ಮಾಡಿದ್ದಾರೆ ಅವರನ್ನು ರಕ್ಷಿಸತಕ್ಕ ಸೂತ್ರ ಆಗಬಾರದು. ಯಾರು ತಪ್ಪು ಮಾಡಿದ್ದಾರೆ ಅವರನ್ನು ಶಿಕ್ಷಿಸತಕ್ಕ ಸೂತ್ರ ಆಗಬೇಕು. ವಿಚಾರಣೆ ಆಗುವುದು, ತಪ್ಪು ಮಾಡಿದವನು ಏನೂ ತಪ್ಪು ಮಾಡಿಲ್ಲದ ಸಾಚಾ ತರಹ ತಿರುಗಾಡುವಂತೆ ಆಗಬಾರದು.

ಶ್ರೀ ಬಿ. ರಾಚಯ್ಯ.—ಇವರ ಮೇಲೆ ಜಿಲ್ಲಾ ಎಸ್.ಪಿ. ಅವರು ವಿಚಾರಣೆ ಮಾಡುವಂತೆ ಸೂಚಿಸಲಾಗಿತ್ತು. ಈಗ ಇವರಿಬ್ಬರನ್ನೂ ಅಮಾನತ್ತಿನಲ್ಲಿಟ್ಟು, ಬೇರೆಯವರಿಂದ ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಮಾಡಿಸುತ್ತೇವೆ. ಎಸ್.ಪಿ. ಅವರ ಮೇಲೂ ಆರೋಪಣೆ ಇರುವುದರಿಂದ ಅದನ್ನು ಡಿ.ಜಿ.ಪಿ. ಅವರು ವಿಚಾರಣೆ ಮಾಡಬೇಕೆಂದು ಹಾಕಿದ್ದೇವೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇವರ ಮೇಲೆ ಎಷ್ಟು ದಿನದಲ್ಲಿ ವಿಚಾರಣೆ ನಡೆಸಿ ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ಸ್ಪಷ್ಟ ಭರವಸೆ ಕೊಡಿ. ನಾವು ವಿಚಾರಣೆ ಎಂದು ಹೇಳುತ್ತೇವೆ, ವಿಚಾರಣೆ ಆದಮೇಲೆ ವರದಿ ಬಿಡುತ್ತೇವೆ, ಆದುದರಿಂದ ಇಷ್ಟು ದಿವಸದ ಒಳಗೆ ವಿಚಾರಣೆ ನಡೆಸಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿ. ನೀವು ಆಜ್ಞೆ ಹೊರಡಿಸುವುದಕ್ಕೆ ಎಷ್ಟು ದಿವಸ ಆಗುತ್ತದೋ. ನಿಮ್ಮ ಸಸ್ಪೆನ್‌ಷನ್ ಆರ್ಡರ್ ಎಷ್ಟು ದಿವಸಕ್ಕೆ ತಲುಪುತ್ತದೆ. ಅದಾದನಂತರ ಎಷ್ಟು ದಿವಸಕ್ಕೆ ವಿಚಾರಣೆ ಮಾಡುತ್ತೀರಿ ಅದನ್ನು ಅದರಲ್ಲಿ ಹೇಳಿಬಿಡಿ. ನಾನು ಹೋಗುವುದರೊಳಗೆ ತಲುಪಿದರೆ ಒಳ್ಳೆಯದು, ಇಲ್ಲದೇ ಹೋದರೆ ನನ್ನನ್ನು ತೆಗೆದುಕೊಂಡು ಹೋಗಿ ಲಾಕಪ್‌ನಲ್ಲಿ ಹಾಕಿರುತ್ತಾರೆ.

ಶ್ರೀ ಬಿ. ರಾಚಯ್ಯ.—ನಿಜ ಹೇಳುವುದಾದರೆ ರಾತ್ರಿ ಇದಕ್ಕೆ ನಾನು ಆರ್ಡರ್ಸ್ ಹೊರಡಿಸುತ್ತೇನೆ. ಬಹುಶಃ ನೀವು ಇದಕ್ಕೆ ಕ್ಯಾಟಲಿಟಿಕ್ ಏಜೆಂಟ್ ಆಗಿದ್ದೀರಿ. ಆರ್ಡರ್ಸ್ ಬೇಗ ಹೊರಡಿಸುವುದಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ವಿಚಾರಣೆ ಎಷ್ಟು ದಿವಸದ ಒಳಗೆ ಮಾಡುತ್ತೀರಿ ?

ಶ್ರೀ ಬಿ. ರಾಚಯ್ಯ.—ಸಾಧ್ಯವಾದಷ್ಟು ಬೇಗ ಮಾಡುತ್ತೇವೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇಷ್ಟು ದಿವಸದ ಒಳಗೆ ಎಂದು ಹೇಳಿ. ಒಂದು ತಿಂಗಳ ಒಳಗೆ ವಿಚಾರಣೆ ಮಾಡಿ ತಕ್ಕ ಶಿಕ್ಷೆ ಮಾಡಬೇಕೆಂದು ಆದರಲ್ಲಿ ಹೇಳಿ.

ಶ್ರೀ ಬಿ. ರಾಚಯ್ಯ.—ಆಯಿತು, ಮೂರು ತಿಂಗಳ ಒಳಗೆ ಮಾಡಿಸುತ್ತೇನೆ.

ಉಪಾಧ್ಯಕ್ಷರು.—ಮೂರು ತಿಂಗಳ ಒಳಗೆ ಎಂದು ಅವರು ಹೇಳಿದ್ದಾರೆ. ಇನ್ನು ಹಿಂಬಿನೇ ನಿಯಮದ ಕೆಳಗೆ ಪ್ರಸ್ತಾಪ ಮಾಡುವ ವಿಷಯಗಳನ್ನು ತೆಗೆದುಕೊಳ್ಳೋಣ. ಯಡಿಯೂರಪ್ಪ ನವರೇ ತಾವು ಪ್ರಸ್ತಾಪ ಮಾಡಿ.